ಅ) ಹುಕ್ಕೇರಿ ತಾಲ್ಲೂಕಿನ ಬೆಲ್ಲದ ಬಾಗೇವಾಡಿ ಗ್ರಾಮಕ್ಕೆ ಕುಡಿಯುವ ನೀರಿನ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ತೊಂದರೆ ಹೋಗಲಾಡಿಸಲು ಘಟಪ್ರಭಾ ನದಿಯಿಂದ ಕೊಳವೆ ಮೂಲಕ ನೀರು ಒದಗಿಸುವ ಯೋಜನೆ ಸರ್ಕಾರದಲ್ಲಿ ಇದೆಯೇ?

ಇ) ಇದ್ದಲ್ಲಿ, ಅದನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು):

ಅ) ಹೌದು

ಆ) ಇಲ್ಲ.

ಆದರೆ, ಈ ಗ್ರಾಮವನ್ನು ವಿಶ್ವಬ್ಯಾಂಕ್ ನೆರವಿನ ಸಮಗ್ರ ಗ್ರಾಮೀಣ ನೀರು ಸರಬರಾಜು ಮತ್ತು ಪರಿಸರ ನೈರ್ಮಲ್ಯ ಯೋಜನೆಯಲ್ಲಿ ಸೇರಿಸಲಾಗಿದೆ.

ಇ) 1996-97

ಪಂಚಾಯಿತಿ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಚುನಾವಣೆಗಳನ್ನು ಮುಂದೂಡಿರುವುದು

628 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪಂಚಾಯತಿ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಚುನಾವಣೆಗಳನ್ನು ನಿಗದಿಪಡಿಸಿ ನಂತರ ಕೆಲವು ಜಿಲ್ಲೆಗಳಲ್ಲಿ ಅವುಗಳನ್ನು ಮುಂದೂಡಲಾದ ಸಂಗತಿ ನಿಜವೇ?

ಆ) ಹಾಕಿದ್ದಲ್ಲಿ ಅವುಗಳನ್ನು ಮುಂದೂಡಲು ಕಾರಣಗಳೇನು?

ಇ) ಜಿಲ್ಲಾಧಿಕಾರಿಗಳು ಆ ಪಂಚಾಯತಿ ಚುನಾವಣೆಗಳನ್ನು ಮುಂದೂಡಲಾದ ಕ್ಷೇತ್ರಗಳಲ್ಲಿ ಯಾವ ಯಾವ ತಪ್ಪನ್ನು ಮಾಡಿದ್ದರು?

ಈ) ಉಳಿದ ಜಿಲ್ಲೆಗಳಲ್ಲಿಯೂ ಸಹ ಇದೇ ಪ್ರಕಾರವಾಗಿ ಜಿಲ್ಲಾಧಿಕಾರಿಗಳು ಅಧ್ಯಕ್ಷ ಹಾಗೂ ಉಪಾಧ್ಯಕ್ಷರನ್ನು ಆರಿಸಬೇಕಾದ ನಿಯಮಗಳನ್ನು ಅನುಸರಿಸಿದ್ದರೂ ಕೂಡ ಆ ಕ್ಷೇತ್ರಗಳಲ್ಲಿ ಚುನಾವಣೆಗಳನ್ನು ಏಕೆ ಮುಂದೂಡಲಾಗಿರುವುದು?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಹೌದು.

ಆ) ಗ್ರಾಮ ಪಂಚಾಯತಿಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳ ಸ್ಥಾನಗಳ ಮೀಸಲಾತಿಯನ್ನು ಸರ್ಕಾರವು ನೀಡಿದ ಮಾರ್ಗದರ್ಶನದ ಆಜ್ಞೆಯ ಸಂಖ್ಯೆ : ಗ್ರಾಅಪ:755 ಜಿಪಸ 93 ದಿ : 2-2-94ನ್ನು ಅನುಸರಿಸದೇ ಕೆಲವು ಜಿಲ್ಲಾಧಿಕಾರಿಗಳು ಹುದ್ದೆಗಳನ್ನು ಮೀಸಲಿಡಲು ಆಜ್ಞೆಗಳನ್ನು ನೀಡಿದ್ದಾರೆ ಎಂದು ಸರ್ಕಾರಕ್ಕೆ ಮನವಿಗಳು ಬಂದಿರುತ್ತದೆ. ಅಂತಹ ಜಿಲ್ಲಾಧಿಕಾರಿಗಳನ್ನು ಗ್ರಾಮ ಪಂಚಾಯತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳ ಸ್ಥಾನಗಳ ಮೀಸಲಾತಿಯ ಬಗ್ಗೆ ಸರ್ಕಾರವು ನೀಡಿದ ಮಾರ್ಗದರ್ಶನದ (ಗೈಡ್ಲೈನ್ಸ್) ಅನ್ವಯ ಅವರ ಆಜ್ಞೆಗಳನ್ನು ಪರಿಶೀಲಿಸಿ ನಂತರ ಚುನಾವಣೆಗಳನ್ನು ನಡೆಸುವಂತೆ ಸೂಚಿಸಲಾಗಿತ್ತು.

ಡಂಕಲ್ ಪ್ರಸ್ತಾವ ಹಾಗೂ ಗ್ಯಾಟ್ ಒಪ್ಪಂದ

558 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?